473(451) ಶ್ರೀ ಕಟ್ಟಾಸುಬ್ರಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004–05ನೇ ಸಾಲಿನಲ್ಲಿ ವೈದ್ಯಕೀಯ, ದಂತ ಹಾಗೂ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಸಿ ಇ ಟಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಆ) ಸಿ ಇ ಟಿ ಕೌನ್ಸಿಲಿಂಗ್ ಪ್ರಾರಂಭಿಸಲಾಗಿದೆಯೇ,

ಇ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು

ಈ) ಸಿ ಇ ಟಿ ಮೂಲಕ ವೃತ್ತಿ ಶಿಕ್ಷಣ ಪ್ರವೇಶಕ್ಕೆ ಲಭ್ಯವಿರತಕ್ಕ ಸೀಟುಗಳೆಷ್ಟು

ಉ) ಕಾಮೆಡ್–ಕೆ ಹಾಗೂ ಸರ್ಕಾರದ ನಡುವೆ ಸೀಟುಗಳ ಹೊಂದಾಣಿಕೆಗೆ ಸಂಬಂಧಪಟ್ಟಂತೆ ಇರತಕ್ಕ ಬಿಕ್ಕಟ್ಟನ್ನು ನಿವಾರಿಸಲು ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) 2004–05ನೇ ಸಾಲಿನಲ್ಲಿ ವೈದ್ಯಕೀಯ, ದಂತ ಹಾಗೂ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಸಿ ಇ ಟಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 92,912

ಆ) ಪ್ರಾರಂಭಿಸಲಾಗಿತ್ತು ಆದರೆ, ದಿನಾಂಕ 15 07 2004ರಂದು ಸರ್ವೋಚ್ಚ ನ್ಯಾಯಾಲಯವು ಸೀಟು ಹಂಚಿಕೆ ಅನುಪಾತದಲ್ಲಿ ನೀಡಿರುವ ಮಧ್ಯಂತರ ತೀರ್ಪಿನಿಂದ ಉಂಟಾದ ಗೊಂದಲದಿಂದ ಸದ್ಯಕ್ಕೆ ಕೌನ್ಸಿಲಿಂಗ್ ನಿಲ್ಲಿಸಲಾಗಿದೆ

ಇ) ಉದ್ಭವಿಸುವುದಿಲ್ಲ

ಈ) ಈ ವಿಷಯದ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿದೆ

ಉ) ಅಧಿಕಾರಿಗಳ ಸಮಿತಿಯು ಆಡಳಿತ ಮಂಡಳಿಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿದೆ ಸಚಿವ ಸಂಪುಟ ಉಪ ಸಮಿತಿಯೂ ಸಹ ಹಲವು ಬಾರಿ ಸಭೆ ಸೇರಿ ಸಮಸ್ಯೆ ನಿವಾರಣೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಗಳ ಪ್ರತಿನಿಧಿಗಳೊಂದಿಗೆ ಮೂರು ಭಾರಿ ಸಭೆ ನಡೆಸಲಾಗಿದೆ ಸಮಸ್ಯೆಯ ನಿವಾರಣೆಗೋಸ್ಕರ 2004–05ನೇ ಸಾಲಿಗೆ ಪ್ರವೇಶಾತಿ ಬಗ್ಗೆ ಶಾಸನ ತರಲಾಗುತ್ತಿದೆ

475(825) ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುರುವೇಕೆರೆಯಲ್ಲಿ ಇರುವ ವಕ್ಫ್ ಆಸ್ತಿಗಳು ಯಾವವು?

ಆ) ಈ ವಕ್ಫ್ ಆಸ್ತಿಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಕಳೆದ 3 ವರ್ಷಗಳಿಂದ ಈ ಬಾಬ್ತಿಗಾಗಿ ಎಷ್ಟು ಹಣವನ್ನು ವ್ಯಯ ಮಾಡಲಾಗಿದೆ?

ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಕಂದಾಯ ಸಚಿವರು)

ಅ) ತುರುವೇಕೆರೆ ಹಾಗೂ ತುರುವೇಕೆರೆ ಗ್ರಾಮ ಪ್ರದೇಶಗಳಲ್ಲಿ ಮಸೀದಿಗಳು ದರ್ಗಾ, ಈದ್ಗಾ ಖಬ್ರಸ್ಥಾನ ಇತರೆ ಒಟ್ಟು 37 ವಕ್ಫ್ ಆಸ್ತಿಗಳಿವೆ

(ಅನುಬಂಧ–1)

ಆ) ಸದರಿ ಆಸ್ತಿಯಿಂದ ಬರುವ ಆದಾಯದಿಂದ ಸದರಿ ಆಸ್ತಿಗಳನ್ನು ಸುರಕ್ಷತೆ ಹಾಗೂ ಅಭಿವೃದ್ಧಿಪಡಿಸಲು ಅಲ್ಲದೆ ಅಗತ್ಯವಿರುವ ಆಸ್ತಿಗಳ ದುರಸ್ತಿ, ಸುರಕ್ಷತೆ ಹಾಗೂ ನಿರ್ವಹಣೆಗಾಗಿ ಸರ್ಕಾರದಿಂದ ಅನುದಾನ ಸಹ ನೀಡಲಾಗುತ್ತಿದೆ